
# ಹಳೆಯ ಕವಿತೆಗಳ ಹೊಸ ಓದಿನ ಬಗೆ

ಹಳೆಯ ಕವಿತೆಗಳ ಹೊಸ ಓದಿನ ಬಗೆಯೊಂದು ಈ ಕೃತಿಯಲ್ಲಿ ತಿಳುವಿಗೆ ಬರುತ್ತದೆ. ಸುರೇಶ ನಾಗಲಮಡಿಕೆ ಅವರು ಕೆ.ಎಸ್. ನರಸಿಂಹಸ್ವಾಮಿ ಅವರ ಕವಿತೆಗಳೊಂದಿಗೆ ನಡೆಸಿದ ಅನುಸಂಧಾನದ ಫಲವಾಗಿ ಹೊರಬಂದಿರುವ ವಿಮರ್ಶಾಕೃತಿ 'ಉಳಿದದ್ದು ಆಕಾಶ' ಗಮನ ಸೆಳೆಯುವಂತಿದೆ.

ಸಾಮಾಜಿಕ ಮತ್ತು ರಾಜಕೀಯವಾಗಿ ಸೈತಾನನ ನರಕದಂತಾಗಿರುವ ವರ್ತಮಾನದ ಬದುಕು, ಕುಟುಂಬ, ವಿಷಮವಾಗಿರುವ ಗಂಡುಹೆಣ್ಣಿನ ಸಂಬಂಧಗಳನ್ನು ಪುನರ್‌ಮನನಗಾಣುವ ಬಗೆಯೊಂದನ್ನು ತಿಳಿಸುತ್ತಲೇ, ಈ ಪುಟ್ಟ ವಿಮರ್ಶಾಕೃತಿ ತನ್ನೊಳಗೆ ಮಂದ್ರಸ್ವರದಿಂದ ಹರಿಯುವ ಮಾನವತೆಯ ಸಂಬಂಧಗಳನ್ನು ಬೆಸೆಯಲು ಪ್ರಯತ್ನಿಸಿದೆ.



ಉಳಿದದ್ದು ಆಕಾಶ (ವಿಮರ್ಶೆ)
ಲೇ: ಸುರೇಶ ನಾಗಲಮಡಿಕೆ
ಪ್ರ: ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್ (ರಿ), ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆವರಣ, ಮಂಡ್ಯ

ಸಾಮಾನ್ಯವಾಗಿ ಕೆಎಸ್‌ನ ಅವರನ್ನು 'ಮಲ್ಲಿಗೆಯ ಕವಿ', 'ದಾಂಪತ್ಯ ಪ್ರೇಮ'ದ ಕವಿಯೆಂದು ರೂಢಿಗತವಾಗಿ ಕರೆಯುವ ಶಬ್ದರಾಶಿಯಿಂದ ಅವರ ಕವಿತೆಗಳನ್ನು ವಿಮೋಚನೆಗೊಳಿಸಿ, ಹೊಸಕಾಲದ ದಂದುಗಗಳ ನಡುವೆ ಅವರ ಕವಿತೆಗಳನ್ನು ಪರಿಕಿಸಿ ನೋಡುವ ಪ್ರಯತ್ನ ಇಲ್ಲಿದೆ.

ತಾತ್ವಿಕವಾಗಿ 'ಬುದ್ಧ ಮತ್ತು ಗಾಂಧಿ' ಅವರಿಂದ ಪ್ರಭಾವಿತರಾಗಿರುವ ಕೆಎಸ್‌ನ ಅವರ ಕವಿತೆಗಳು ದಾಂಪತ್ಯ ಪ್ರೇಮದಲ್ಲೇ ನಿಲುಗಡೆಯಾಗದೆ, ತನ್ನ ಕಾಲದ ರೌದ್ರತೆಗಳನ್ನೂ ಎದುರುಗೊಳ್ಳುತ್ತವೆ. ಅಂತಿಮವಾಗಿ 'ಗಾಂಧಿ ಮಾನವತಾವಾದ' ಎಂದು ಕರೆಯಬಹುದಾದ ನಿಲುವೊಂದು ಅವರಲ್ಲಿ ಅಂತರ್ಗತವಾಗಿದೆ. ಕವಿತೆಗಳ ಪ್ರಧಾನ ನೆಲೆ 'ಗಾಂಧಿ ಕೇಂದ್ರಿತ ಭಾರತೀಯತೆಯೇ ಹೊರತು, 'ಹಿಂದುತ್ವದ' ಮೂಲದ್ದಲ್ಲ' ಎಂದು ಈ ಅಧ್ಯಯನ ನಿರ್ವಚಿಸುತ್ತದೆ. ಕವಿಯ ಹುಡುಕಾಟವಿರುವುದು 'ಕರುಣಾಳು ಸಮಾಜವನ್ನು ಕ್ರೌರ್ಯ ಹೇಗೆ ನುಂಗತ್ತದೆ' ಎನ್ನುವುದನ್ನು ಮನಗಾಣಿಸುವುದರಲ್ಲಿ.

ಕೆಎಸ್‌ನ ಅವರ ಕವಿತೆಗಳಲ್ಲಿ ಬರುವ ಹೆಣ್ಣನ್ನು 'ಕಾತ್ಯಾಯಿನಿ' ಮಾದರಿ ಹಾಗೂ 'ಗಾರ್ಗಿ' ಮಾದರಿ ಎಂದು ಎರಡು ನೋಟಗಳಿಂದ ಕಂಡಿರಿಸಿದ್ದಾರೆ. 'ಕಾತ್ಯಾಯಿನಿ' ಮಾದರಿಯನ್ನು 'ಗೃಹವಾದಿ', ಪ್ರತಿರೋಧವಿರದ ಬಗೆ ಎಂದು, 'ಗಾರ್ಗಿ' ಮಾದರಿ ಸಂಘರ್ಷದ ಮಾದರಿಯೆಂದು ತೌಲನಿಕವಾಗಿ ವಿವರಿಸುತ್ತಾರೆ. ಕೆಎಸ್‌ನ 'ಭೂಮಿ ಮತ್ತು ತಾಯಿ'ಯನ್ನು ನೋಡಿರುವುದು ಜನಪದ ಲೋಕದೃಷ್ಟಿಯಂತೆ ಎನ್ನುವುದು ಇಲ್ಲಿನ ಬರಹಗಳ ತಿಳಿವು. ಕೆಎಸ್‌ನ ಜಗತ್ತನ್ನು ಕ್ರೌರ್ಯದಿಂದ ನೆಮ್ಮದಿಯ ಕಡೆಗೆ ಕೊಂಡೊಯ್ಯಲು ತವಕಿಸುವ ನಮ್ಮ ಕಾಲದ ಕವಿ ಎಂದು ಇಲ್ಲಿನ ಬರಹ ಅರಿವಿಗೆ ತರುತ್ತದೆ. ಅದು ಸುಡುವ ಕೆಂಡವನ್ನು ಹೂವಾಗಿಸುವ ಆಧ್ಯಾತ್ಮಿಕ ಲೋಕದ ಪ್ರೇಮತತ್ವ. ಕೆಎಸ್‌ನ ಕವಿತೆಗಳ ಶಾಶ್ವತ ಲಯ ಇದು.

**● ಜಿ.ವಿ. ಆನಂದಮೂರ್ತಿ**